ಕೈಗಾರಿಕಾ ಸಚಿವರು ಈ ವಿಷಯದಲ್ಲಿ ಭಾರತ ಸರ್ಕಾರದ ಭಾರಿ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಹಾಗೂ ಕೇಂದ್ರ ಸರ್ಕಾರದ ಹಣಕಾಸು ಸಚಿವರಿಗೆ ಪತ್ರಗಳನ್ನು ಬರೆದು ಈ ಕಂಪನಿಯನ್ನು ಕೇಂದ್ರ ಸರ್ಕಾರವು ಕೂಡಲೇ ಪುನಶ್ಚೇತನ ಮಾಡಬೇಕು ಇಲ್ಲವೆ ಸದ್ರಿ ಕಂಪನಿಯನ್ನು ಜಂಟಿವಲಯದಲ್ಲಿ ಅಥವಾ ಖಾಸಗಿ ವಲಯದ ಮೂಲಕ ಪುನಶ್ಚೇತನಗೊಳಿಸಬೇಕೆಂದು ಕೋರಿದ್ದಾರೆ.

ಮಾನ್ಯ ಕೇಂದ್ರ ಸರ್ಕಾರದ ಭಾರಿ ಕೈಗಾರಿಕೆಗಳು ಮತ್ತು ಸಾರ್ವಜನಿಕ ಉದ್ದಿಮೆಗಳ ಸಚಿವರು ಈ ಬಗ್ಗೆ ಪರಿಶೀಲನೆ ಮಾಡುವುದಾಗಿ ಉತ್ತರವನ್ನು ಕಳುಹಿಸಿರುತ್ತಾರೆ. ಭಾರತ ಸರ್ಕಾರದ ನಿರ್ಣಯಕ್ಕಾಗಿ ಕಾಯಲಾಗುತ್ತಿದೆ.

ರಾಜ್ಯಕ್ಕೆ ಕೇಂದ್ರ ಸರ್ಕಾರದಿಂದ ಪೂರೈಕೆಯಾಗುತ್ತಿರುವ ಆಹಾರ ವಸ್ತುಗಳ ಮಾಹಿತಿ.

2284(2795)

ಶ್ರೀ ಪಿ.ಜಿ.ಆರ್.ಸಿಂಧ್ಯ (ಕನಕಪುರ): ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಕೇಂದ್ರ ಸರ್ಕಾರದಿಂದ ರಾಜ್ಯ ಸರ್ಕಾರಕ್ಕೆ ಪಡಿತರ ಪದ್ದತಿಯ ಯೋಜನೆಗೆ ಬರುತ್ತಿರುವ ಅಕ್ಕಿ ಮತ್ತು ಸಕ್ಕರೆಯ ಒಟ್ಟು ಪ್ರಮಾಣ ಎಷ್ಟು;

ಆ) ಈ ಯೋಜನೆಗೆ ಕೇಂದ್ರ ಮತ್ತು ರಾಜ್ಯ ಸರ್ಕಾರದವರು ಕೊಡುತ್ತಿರುವ ಸಬ್ಸಿಡಿ ಹಣವೆಷ್ಟು;

ಇ) ಕೇಂದ್ರ ಸರ್ಕಾರದಿಂದ ಬರುತ್ತಿರುವ ಅಕ್ಕಿಯ ಗುಣಮಟ್ಟ ಸರಿಯಿಲ್ಲದೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಬಂದಿದ್ದಲ್ಲಿ ಸರ್ಕಾರ ತೆಗೆದುಕೊಂಡಿರುವ ಕ್ರಮಗಳೇನು?

ಶ್ರೀ ಡಿ.ಬಿ.ಇನಾಂದಾರ್ (ಆಹಾರ ಮತ್ತು ನಾಗರೀಕಸರಬರಾಜು ರಾಜ್ಯ ಸಚಿವರು):

ಅ) ದಿನಾಂಕ 1.4.2000ದಿಂದ ಕೇಂದ್ರ ಸರ್ಕಾರ ಮಾಹೆಯಾನ ರಾಜ್ಯಕ್ಕೆ ಬಿಡುಗಡೆ ಮಾಡುತ್ತಿರುವ ಅಕ್ಕಿ ಮತ್ತು ಸಕ್ಕರೆ ಪ್ರಮಾಣದ ವಿವರ:

	ಬಿಪಿಎಲ್	ಎಪಿಎಲ್	ಒಟ್ಟು
ಅಕ್ಕಿ	46,000	37,000	83,000 ಮೆ.ಟನ್
ಸಕ್ಕರೆ	-	-	21,884.2 -''-

ಆ) ಈ ಯೋಜನೆಗೆ ಕೇಂದ್ರ ಸರ್ಕಾರ ಹಣದ ರೂಪದಲ್ಲಿ (ಸಬ್ಸಿಡಿ) ಸಹಾಯಧನ ಒದಗಿಸುತ್ತಿಲ್ಲ. ಆದರೆ ದಿನಾಂಕ 1.4.2000ದಿಂದ 46,000 ಮೆ.ಟನ್ ಅಕ್ಕಿ ಹಾಗೂ 11,500 ಮೆ.ಟನ್ ಗೋಧಿಯನ್ನು ಆರ್ಥಿಕ ದರದ (ಎಕಾನಮಿಕ್ ಕಾಸ್ಟ್) ಶೇ.50ರ ದರದಲ್ಲಿ ಅಂದರೆ ಪ್ರತಿ ಕ್ವಿಂಟಾಲ್ ಅಕ್ಕಿ ರೂ.590-00ರಂತೆ ಹಾಗೂ ಪ್ರತಿ ಕ್ವಿಂಟಾಲ್ ಗೋಧಿ ರೂ.450-00 ರಂತೆ ಒದಗಿಸುತ್ತಿದ್ದಾರೆ.

ಕೇಂದ್ರ ಸರ್ಕಾರದ ನಿರ್ದೇಶನಗಳಂತೆ ರಾಜ್ಯದಲ್ಲಿ ವಿತರಿಸಿರುವ ಎಲ್ಲಾ 64.67 ಲಕ್ಷ ಹಸಿರು ಪಡಿತರ ಚೀಟಿದಾರರಿಗೆ 16 ಕೆ.ಜಿ. ಅಕ್ಕಿ, 4 ಕೆ.ಜಿ. ಗೋಧಿ ಒಟ್ಟು 20 ಕೆ.ಜಿ. ಆಹಾರಧಾನ್ಯ ಒದಗಿಸಲು ವಾರ್ಷಿಕವಾಗಿ ರೂ.550-00 ಕೋಟಿ ಆಹಾರ ಸಹಾಯಧನ ಹಾಗೂ ಸಾಗಾಣಿಕೆ ವೆಚ್ಚಕ್ಕಾಗಿ ಭರಿಸಬೇಕಿರುತ್ತದೆ. ಈ 64.67 ಲಕ್ಷ ಹಸಿರು ಪಡಿತರ ಚೀಟಿಗಳಲ್ಲಿ ಕೇವಲ 28.75 ಲಕ್ಷ ಕುಟುಂಬಗಳ ಚೀಟಿಗಳಿಗೆ ಮಾತ್ರ ಕೇಂದ್ರ ಸರ್ಕಾರದವರು ಸಬ್ಸಿಡಿ ಒದಗಿಸುತ್ತಿದ್ದಾರೆ.

ಇ) ಬಂದಿದೆ.

ಈ) ಕೇಂದ್ರ ಸರ್ಕಾರ ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಯು.ಆರ್.ಎಸ್. ನಾನ್ ಯು.ಆರ್.ಎಸ್. ಅಕ್ಕಿಯನ್ನು ಸರದಿ ಆಧಾರದ ಮೇಲೆ ಬಿಡುಗಡೆ ಮಾಡುತ್ತಿದೆ. ಯು.ಆರ್.ಎಸ್. ಮಾದರಿ ಅಕ್ಕಿಯ ಗುಣಮಟ್ಟ ತೃಪ್ತಿಕರವಾಗಿಲ್ಲದಿದ್ದು ಈ ಮಾದರಿ ಅಕ್ಕಿಯನ್ನು ಒದಗಿಸಕೂಡದೆಂದು ರಾಜ್ಯ ಸರ್ಕಾರ ಕೇಂದ್ರ ಸರ್ಕಾರವನ್ನು ಒತ್ತಾಯಿಸಿದೆ. ಒಳ್ಳೆ ಗುಣಮಟ್ಟದ ಅಕ್ಕಿಯನ್ನು ಮಾತ್ರ ಎತ್ತುವಳಿ ಮಾಡುವ ಬಗ್ಗೆ ಇಲಾಖಾ ಅಧಿಕಾರಿಗಳಿಗೆ ಹಾಗೂ ಸಗಟು ನಾಮಿನಿದಾರರಿಗೆ ಕಾಲ ಕಾಲಕ್ಕೆ ಸೂಚನೆಗಳನ್ನು ನೀಡಲಾಗುತ್ತಿದೆ.

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮಕ್ಕೆ ಬರಬೇಕಾದ ಬಾಕಿ.

2285(2796)

ಶ್ರೀ ಸಿಂಧ್ಯ ಪಿ.ಜಿ.ಆರ್.(ಕನಕಪುರ): ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?